ದಿನಾಂಕಃ 06-6-2017 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಚ್ಚುವರಿ ಪಾಟೀ ಸವಾಲುಃ ಶ್ರೀ ಸಿ.ಡಿ.ಎಂ. ವಾದಿ ಪರ ವಕೀಲರಿಂದಃ

ನಿಡಿ.10 ಮತ್ತು 11 ತೀರ್ಪು ಮತ್ತು ಡಿಕ್ರಿಯಾಗಿರುವ ದಾವೆಯಲ್ಲಿ ವಾದಿ ಹಾಗೂ 2ನೇ ಪ್ರತಿವಾದಿ ಪಕ್ಷಗಾರರಲ್ಲ ಎಂದರೆ ಸರಿ. ಈದಾವೆಯನ್ನು ಶಿವನಂಜೇಗೌಡರು ಸ.ನಂ.285/2, 3 ಮತ್ತು 4ರ ಜಮೀನುಗಳಿಗೆ ಹೋಗಲು ದಾರಿ ಹಕ್ಕು ಕೇಳಿ ದಾಖಲಿಸಿದ್ದರು ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆ ಪಾಪಣ್ಣ ಪಕ್ಷಗಾರರಾಗಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನನ್ನ ಸಾಕ್ಷ್ಯ ಆಗಿದೆ ಎಂದರೆ ಸರಿ. ಈ ದಾವೆಯಲ್ಲಿ ನಮ್ಮ ಪರ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರದಲ್ಲಿ ಶಿವನಂಜೇಗೌಡರಿಗೆ ನಾಲಾ ಏರಿ ಮೇಲೆ ಹಾಯ್ದು ಹೋಗಿ ಅವರ ಜಮೀನು ಸ.ನಂ.285/2, 3 ಮತ್ತು 4ರ ಜಮೀನುಗಳಿಗೆ ಹೋಗಬಹುದು ಎಂದು ಬರೆಸಿ ಹಾಕಿದ್ದೇವೆ ಎಂದರೆ ಸರಿ. ಆ ನಾಲಾ ಏರಿ ಮೇಲೆ ವಾದಿ ಅವರ ಜಮೀನುಗಳಿಗೆ ಹೋಗುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಾವೆಯಲ್ಲಿದ್ದ ನಾಲಾ ಏರಿ 4ನೇ ಮೈಲಿ ಇದ್ದು ಈ ದಾವೆಯಲ್ಲಿ ಕೇಳುತ್ತಿರುವ ನಾಲಾ ಏರಿ 3ನೇ ಮೈಲಿ ಇರುತ್ತದೆ. ಈ ಎರಡೂ ಮೈಲಿ ಬೇರೆ ಇದ್ದರೂ ಸಹ ರಾಮಸಮುದ್ರ ನಾಲೆಯ ಏರಿ ಒಂದೇ ಎಂದರೆ ಸರಿ.

ಈ ದಾವೆಯಲ್ಲಿ ತೀರ್ಪು ಆದ ನಂತರ ಶಿವನಂಜೇಗೌಡರು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ತಾಃ 6-8-2010ರಂದು ವಜಾ ಆಗಿದೆ ಎಂದರೆ ಸರಿ. ನನ್ನ ಹಾಗೂ ನನ್ನ ಹೆಂಡತಿಯ ವಿರುದ್ಧ ಎಲ್‌ಎನ್‌ಟಿ 47/2010-11 ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನನ್ನ ಹಾಗೂ ನನ್ನ ಹೆಂಡತಿಯ ಹೆಸರಿಗೆ ಸ.ನಂ.208ರಲ್ಲಿ ನನ್ನ ಹೆಸರಿಗೆ ದಾಖಲಾಗಿದ್ದ 1 ಎಕರೆ ಜಮೀನನ್ನು ಪ್ರಶ್ನಿಸಿ ಮತ್ತು ಸದರಿ ಜಮೀನನ್ನು ಸಾರ್ವಜನಿಕ ಜಮೀನು ಎಂಬುದಾಗಿ ಆದೇಶಿಸಬೇಕೆಂದು ಪರಿಹಾರ ಕೋರಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ತಾಃ 17-10-2011ರಲ್ಲಿ ಪುರಸ್ಕರಿಸಿ 1 ಎಕರೆ ಜಮೀನು ಸಾರ್ವಜನಿಕ ಉಪಯೋಗಕ್ಕಾಗಿ ಎಂದು ಆದೇಶವಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ನಾನು ಮೇಲ್ಮನವಿ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ವಾದಿ ತನ್ನ ಜಮೀನಿಗೆ ದಾವಾ ಸ್ವತ್ತಿನಲ್ಲಿ ಹಾಯ್ದು ಹೋಗುವುದನ್ನು ತಪ್ಪಿಸುವ ಸಲುವಾಗಿ ಈ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ರಳಚ್ಚು ಮಾಡಲಾಯಿತು.

ಮರು ವಿಚಾರಣೆಃ ಇಲ್ಲಾ

ಓ ಹೇ ಕೇ ಸ ಇ ಒಪ್ಪಿದೆ,

(ರಮೇಶ ಎಸ್.ಗಾಣಿಗೇರ)
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಕೆ.ಆರ್.ನಗರ